ದಿನಾಂಕ 28-9-2013 ರಂದು ಕೊಠಡಿ ಸಂ. 252. ಬಹುಮಹಡಿ ಕಟ್ಟಡ, ಬೆಂಗಳೂರಿನಲ್ಲಿ ಜರುಗಿದ ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ವ್ಯವಸ್ಥಾಪನಾ ಮಂಡಳಿಯ ಹದಿನಾರನೇಯ ಸಭೆಯ ನಡುವಳಿಗಳು:

ಉಪಸ್ಥಿತರಿದ್ದ ಸದಸ್ಯರು:

| | | |
|---|---|---|
| 1. | ಡಾ. ಬಿ.ವಿ. ಪಾಟೀಲ | ಅಧ್ಯಕ್ಷರು |
| 2. | ಶ್ರೀ ಶ್ರೀ ಭರತ್‌ಲಾಲ್ ಮೀನಾ | ಸದಸ್ಯರು |
| 3. | ಶ್ರೀ ಎಂ.ಕೆ. ಶಂಕರಲಿಂಗೇ ಗೌಡ | ಸದಸ್ಯರು |
| 4. | ಶ್ರೀ ರಾಮಚಂದ್ರ | ಸದಸ್ಯರು |
| 5. | ಶ್ರೀ ಸುಂದರ ರಾಜ್ ಗುಪ್ತ | ಸದಸ್ಯರು |
| 6. | ಶ್ರೀ ಹೆಚ್.ಎಸ್. ಸಾದತ್ ಅಲಿ ಖಾನ್ | ಸದಸ್ಯರು |
| 7. | ಶ್ರೀ ಪ್ರವೀಣ ವಿ. ನಾಯಕ್ | ಸದಸ್ಯರು |
| 8. | ಡಾ. ಪಿ. ಬಾಲಕೃಷ್ಣನ್ | ಸದಸ್ಯರು |
| 9. | ಡಾ. ಡಿ.ಪಿ. ಬಿರಾದಾರ | ಸದಸ್ಯ-ಕಾರ್ಯದರ್ಶಿ |

ಪ್ರಾರಂಭದಲ್ಲಿ, ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಮಾನ್ಯ ವ್ಯವಸ್ಥಾಪನಾ ಮಂಡಳಿಯ ಹದಿನಾರನೇಯ ಸಭೆಗೆ ಸರ್ವಸದಸ್ಯರನ್ನು ಮಾನ್ಯ ಕುಲಪತಿಗಳು ಹಾಗೂ ಅಧ್ಯಕ್ಷರು ಸ್ವಾಗತ ಕೋರಿದರು. ತದನಂತರ, ಕಾರ್ಯಸೂಚಿಯ ಪ್ರಕಾರ ಚರ್ಚಿಸಿ ಕೆಳಕಂಡಂತೆ ತೀರ್ಮಾನಗಳನ್ನು ಕೈಗೊಳ್ಳಲಾಯಿತು.

| | |
|---|---|
| **ಅನುಕ್ರಮ ಸಂ: 1** | **ದಿನಾಂಕ 18-6-2013 ರಂದು ಜರುಗಿದ ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಮಾನ್ಯ ವ್ಯವಸ್ಥಾಪನಾ ಮಂಡಳಿಯ ಹದಿನೈದನೇಯ ಸಭೆಯ ನಡುವಳಿಗಳನ್ನು ಸ್ಥಿರೀಕರಿಸುವುದು ಮತ್ತು ಅವುಗಳ ಪ್ರಕಾರ ಕೈಗೊಂಡ ಕ್ರಮಗಳನ್ನು ಅನುಮೋದಿಸುವುದು** |

**ಠರಾವು:**

ದೀರ್ಘ ಚರ್ಚೆಯ ನಂತರ ಮಾನ್ಯ ವ್ಯವಸ್ಥಾಪನಾ ಮಂಡಳಿಯ ಹದಿನೈದನೇಯ ಸಭೆಯ ನಡುವಳಿಕೆಗಳನ್ನು ಓದಲಾಯಿತೆಂದು ಪರಿಗಣಿಸಿ, ಸ್ಥಿರೀಕರಿಸಲಾಯಿತು. ಮುಂದುವರೆದು, ಅವುಗಳ ಪ್ರಕಾರ ಕೈಕೊಂಡ ಕ್ರಮಗಳಿಗೆ ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು.

ಮುಂದುವರೆದು, ಪ್ರಧಾನ ಕಾರ್ಯದರ್ಶಿಗಳು (ಕೃಷಿ) ಅವರು ಎಲ್ಲಾ ಕೃಷಿ ವಿಶ್ವವಿದ್ಯಾಲಯಗಳ ಪರಿನಿಯಮಗಳನ್ನು ಕ್ರೋಢೀಕರಿಸಿ ಸಂಪುಟ ಸಭೆಗೆ ಮುಂದಿನ ಕ್ರಮಕ್ಕಾಗಿ ಕಳುಹಿಸಲಾಗಿದೆಯೆಂದು ತಿಳಿಯಪಡಿಸಿದರು.

(ಕ್ರಮ : ಕುಲಸಚಿವರು)

| | |
|---|---|
| **ಅನುಕ್ರಮ ಸಂ: 2** | **ಕೃಷಿ ವಿಶ್ವವಿದ್ಯಾಲಯ ರಾಯಚೂರಿನ 2011-12 ಮತ್ತು 2012-13 ನೇ ಸಾಲಿನ ವಾರ್ಷಿಕ ಖರ್ಚುವೆಚ್ಚಗಳಿಗೆ ಅನುಮೋದನೆ ಕುರಿತು.** |

**ಠರಾವು:**

ವಿಸ್ತೃತ ಚರ್ಚೆಯ ನಂತರ, 2011-12 ಹಾಗೂ 2012-13 ನೇ ಸಾಲಿನ ವಾರ್ಷಿಕ ಖರ್ಚುವೆಚ್ಚಗಳಿಗೆ ಲೆಕ್ಕಪರಿಶೋಧನೆಗಾಗಿ ರಾಜ್ಯ ಲೆಕ್ಕಪತ್ರ ಇಲಾಖೆಗೆ ಸಲ್ಲಿಸಲು ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು.

ಆದಾಗ್ಯೂ, ರಾಜ್ಯ ಲೆಕ್ಕಪತ್ರ ಇಲಾಖೆಯು ಸೂಚಿಸಿದ ಅಂಶಗಳಿಗೆ ಮಾಹಿತಿ ಮತ್ತು ಕಂಡಿಕೆವಾರು ಉತ್ತರಗಳ ಮಾಹಿತಿಯನ್ನು ಕ್ರೋಢೀಕರಿಸಿ ಘನ ವೇದಿಕೆಯ ಗಮನಕ್ಕೆತರಲು ಪ್ರಧಾನ ಕಾರ್ಯದರ್ಶಿಗಳು (ಕೃಷಿ) ಅವರು ಸಲಹೆ ನೀಡಿದರು. ವಿಶ್ವವಿದ್ಯಾಲಯದ ಹಣವನ್ನು ಶೆಡ್ಯೂಲ್ಡ್ / ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ಠೇವಣಿ ಇಡಲು ಸಲಹೆ ನೀಡಿದರು. ಸರಕಾರವು ಯಾವ ಉದ್ದೇಶಕ್ಕೆ ಅನುದಾನ ನೀಡಿದೆಯೋ ಅದಕ್ಕೆ ಮಾತ್ರ ಹಾಗೂ ನಿಗದಿತ ಕಾಲಾವಧಿಯಲ್ಲಿ ಖರ್ಚು ಮಾಡಲು ಸಹ ಸಲಹೆ ನೀಡಿದರು.

(ಕ್ರಮ : ಹಣಕಾಸು ನಿಯಂತ್ರಣಾಧಿಕಾರಿಗಳು)

| ಅನುಕ್ರಮ ಸಂ: 3 | ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ವಿವಿಧ ಆವರಣಗಳಲ್ಲಿ ಕೃಷಿ ಮೇಳಗಳನ್ನು ಏರ್ಪಡಿಸುವ ಸಲುವಾಗಿ ದಿನಾಂಕಗಳಿಗೆ ಅನುಮೋದನೆ ಕುರಿತು. |
|---|---|

**ಠರಾವು:**

ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ವಿವಿಧ ಆವರಣಗಳಲ್ಲಿ ಕೃಷಿ ಮೇಳಗಳನ್ನು ಏರ್ಪಡಿಸಲು ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು. (ಕ್ರಮ : ವಿಸ್ತರಣಾ ನಿರ್ದೇಶಕರು)

| ಅನುಕ್ರಮ ಸಂ: 4 | ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ವಿವಿಧ ಸ್ಥಳಗಳಲ್ಲಿ ಹತ್ತು ಲಕ್ಷ ರೂಪಾಯಿಗಳಿಗೆ ಮೀರಿದ ಟೆಂಡರ್ ಮಾಡಿದ ಸಿವಿಲ್ ಕಾಮಗಾರಿಗಳನ್ನು ಕೈಗೊಳ್ಳಲು ಅನುಮೋದನೆ ಕುರಿತು. |
|---|---|

**ಠರಾವು:**

ದೀರ್ಘ ಚರ್ಚೆಯ ನಂತರ, ಟೆಂಡರ್ ಕರೆದ ಹಾಗೂ ಈಗಾಗಲೇ ಪೂರ್ಣಗೊಳಿಸಿದ ಕಾಮಗಾರಿಗಳಿಗೆ ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು. ರೈತರುಗಳ ಸಹಭಾಗಿತ್ವದೊಂದಿಗೆ ಅವರುಗಳ ಹೊಲಗಳಲ್ಲಿ ಕಾಮಗಾರಿಗಳನ್ನು ಕೈಗೊಂಡಾಗ, ಸದರಿ ಕಾಮಗಾರಿಯ ಗುಣವತ್ತಾಗಿರಲು ಅವರಿಂದಲೂ ಸಹ ಸ್ವಲ್ಪ ಮಟ್ಟಿಗೆ ಅಂಶದಾನ ಒದಗಿಸುವಂತೆ ಕೇಳಿಕೊಳ್ಳಲು ಸಲಹೆ ನೀಡಲಾಯಿತು. ಇಂತಹ ಯೋಜನೆಗಳು ನಡೆಯುತ್ತಿರುವಲ್ಲಿ ವ್ಯವಸ್ಥಾಪನಾ ಮಂಡಳಿಯ ಸದಸ್ಯರುಗಳು ಭೇಟಿ ಕೊಟ್ಟು ಇನ್ನೂ ಹೆಚ್ಚಿನ ಬೆಳವಣಿಗೆಗೆ ಸಲಹೆ ನೀಡಲು ಮಾನ್ಯ ಅಧ್ಯಕ್ಷರು ತಿಳಿಸಿದರು. (ಕ್ರಮ : ಡೀನ್(ಕೃಷಿ ತಾಂತ್ರಿಕ)/ಕಾರ್ಯನಿರ್ವಾಹಕ ಅಭಿಯಂತರರು)

| ಅನುಕ್ರಮ ಸಂ: 5 | ಹಣಕಾಸಿನ ವ್ಯವಹಾರಗಳಿಗಾಗಿ ಅಧಿಕಾರಗಳ ಪ್ರತ್ಯಾಯೋಜನೆಯನ್ನು ಪರಿಷ್ಕರಿಸುವ ಕುರಿತು |
|---|---|

**ಠರಾವು:**

ವಿಸ್ತೃತ ಚರ್ಚೆಯ ನಂತರ ಸದರಿ ವಿಷಯವನ್ನು ಈ ಕೆಳಗಿನ ಸಲಹೆಯಂತೆ ಅನುಮೋದಿಸಲಾಯಿತು: ಸಾಮಾನ್ಯವಾಗಿ ಪರಿಷ್ಕೃತ ಹಣಕಾಸಿನ ವ್ಯವಹಾರಗಳಿಗಾಗಿ ಅಧಿಕಾರಗಳ ಪ್ರತ್ಯಾಯೋಜನೆಯನ್ನು ಪ್ರಸ್ತುತ ಮೊತ್ತದ ಶೇಕಡ 50 ರಷ್ಟು ಇರುವಂತೆ ನಿರ್ಬಂದಿಸತಕ್ಕದ್ದು. ಉಪ-ಕಾರ್ಯದರ್ಶಿಗಳು (ಹಣಕಾಸು) ಅವರು ಹಣಕಾಸಿನ ಮಂಜೂರಾತಿ ನೀಡುವಾಗ ಕೆ.ಟಿ.ಪಿ.ಪಿ. ಕಾಯ್ದೆಯಲ್ಲಿಯ ಅವಕಾಶಗಳನ್ನು ಹಾಗೂ ವಿಶ್ವವಿದ್ಯಾಲಯದ ನಿಯಮಾವಳಿಗಳನ್ನು ಕಡ್ಡಾಯವಾಗಿ ಪಾಲಿಸಲು ಮತ್ತು ಪದೇ ಪದೇ ಪ್ರತ್ಯಾಯೋಜನೆಯ ಅಧಿಕಾರಗಳನ್ನು ಬದಲಿಸದಿರಲು ಸಲಹೆ ನೀಡಿದರು. (ಕ್ರಮ : ಕುಲಸಚಿವರು/ಸಂಶೋಧನಾ ನಿರ್ದೇಶಕರು)

| ಅನುಕ್ರಮ ಸಂ: 6 | ಕೃಷಿ ವಿಶ್ವವಿದ್ಯಾಲಯ ರಾಯಚೂರಿನಲ್ಲಿ ಸಾವಯವ ಕೃಷಿ ಸಂಶೋಧನಾ ಸಂಸ್ಥೆಯನ್ನು ಸ್ಥಾಪಿಸುವ ಕುರಿತು |
|---|---|

**ಠರಾವು:**

ದೀರ್ಘ ಚರ್ಚೆಯ ನಂತರ, ವಿಶ್ವವಿದ್ಯಾಲಯದಲ್ಲಿ ಮಂಜೂರಾದ ಕೆಲವೊಂದು ಹುದ್ದೆಗಳನ್ನು ಪುನರ್-ನಿಯೋಜನೆ ಮಾಡುವುದರೊಂದಿಗೆ ಕೃಷಿ ವಿಶ್ವವಿದ್ಯಾಲಯ ರಾಯಚೂರಿನಲ್ಲಿ ಸಾವಯವ ಕೃಷಿ ಸಂಶೋಧನಾ ಸಂಸ್ಥೆಯನ್ನು ಸ್ಥಾಪಿಸುವ ಪ್ರಸ್ತಾವನೆಗೆ ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು.

(ಕ್ರಮ : ಕುಲಸಚಿವರು /ಸಂಶೋಧನಾ ನಿರ್ದೇಶಕರು)

| ಅನುಕ್ರಮ ಸಂ: 7 | ಕೃಷಿ ವಿಶ್ವವಿದ್ಯಾಲಯ ರಾಯಚೂರಿನ 2012-13 ನೇ ಸಾಲಿನ ವಾರ್ಷಿಕ ವರದಿಯನ್ನು ಅವಗಾಹನೆಗಾಗಿ ಹಾಗೂ ಅನುಮೋದನೆಗಾಗಿ ಸಲ್ಲಿಸುವ ಕುರಿತು. |
|---|---|

**ಠರಾವು:**

ವಿಸ್ತೃತ ಚರ್ಚೆಯ ನಂತರ ಈ ಕೆಳಗಿನ ಅಂಶಗಳಂತೆ ಸಲಹೆ ನೀಡಲಾಯಿತು:

1. ವಿಶ್ವವಿದ್ಯಾಲಯದಲ್ಲಿ ಸದರಿ ಅವಧಿಯಲ್ಲಿ ಸಂಶೋಧನೆ ಮತ್ತು ವಿಸ್ತರಣೆಯಲ್ಲಿ ಸಾಧಿಸಲಾದ ಸಾಧನೆಗಳ ಸಂಕ್ಷಿಪ್ತ ವಿವರಣೆಗಳನ್ನು ಸೇರಿಸುವುದು.

2. ಸದರಿ ಅವಧಿಯಲ್ಲಿಯ ಒಟ್ಟು ಮಂಜೂರಾದ ಹುದ್ದೆಗಳು, ಭರ್ತಿಯಾಗಿರುವ ಹುದ್ದೆಗಳು ಹಾಗೂ ಖಾಲಿಯಿರುವ ಹುದ್ದೆಗಳ ವಿವರಗಳನ್ನು ಸೇರಿಸುವುದು ಮತ್ತು ವಾರ್ಷಿಕ ವರದಿಯ ಅಂಶಗಳನ್ನು ಸುಧಾರಿಸಿಕೊಳ್ಳಲು ಇತರೇ ಸಂಸ್ಥೆಯ ವರದಿಗಳನ್ನು ನೋಡಿಕೊಳ್ಳಲು ಸಲಹೆ ನೀಡಲಾಯಿತು.
3. ಒಟ್ಟಾರೆಯಾಗಿ ವಿಶ್ವವಿದ್ಯಾಲಯದಿಂದ ಕೈಗೊಂಡ ಕಾರ್ಯಗಳನ್ನು ಸ್ಪಷ್ಟವಾಗಿ ತಿಳಿಯಪಡಿಸುವಂತೆ ಪ್ರಧಾನ ಕಾರ್ಯದರ್ಶಿಗಳು (ಕೃಷಿ) ಅವರು ಸಲಹೆ ನೀಡಿದರು.
4. ಕನ್ನಡದಲ್ಲಿ ಭಾಷಾಂತರಿಸುವುದು ಸ್ಪಷ್ಟವಾಗಿರತಕ್ಕದ್ದು ಮತ್ತು ಅದನ್ನು ಪ್ರಕಟಿಸುವಾಗ ಬಹಳ ಜಾಗರೂಕರಾಗಿರತಕ್ಕದ್ದು.

ವಾರ್ಷಿಕ ವರದಿಯನ್ನು ಸರಕಾರಕ್ಕೆ ಸಲ್ಲಿಸುವ ಮುಂಚೆ ಮೇಲೆ ತಿಳಿಸಿದ ಅಂಶಗಳನ್ನು ಅಳವಡಿಸಿಕೊಳ್ಳುವ ಸಲಹೆಯೊಂದಿಗೆ ಸದರಿ ವಿಷಯಕ್ಕೆ ಅನುಮೋದನೆ ನೀಡಲಾಯಿತು. (ಕ್ರಮ : ವಿಸ್ತರಣಾ ನಿರ್ದೇಶಕರು)

| | |
|---|---|
| ಅನುಕ್ರಮ ಸಂ: 8 | ಶಿಕ್ಷಕರ ನೇರ ನೇಮಕಾತಿಗಾಗಿ ಹಾಗೂ ಪದೋನ್ನತಿಗಾಗಿ ನಿಯಮಾವಳಿಗಳಲ್ಲಿ ನಿಯಮ 3.1.1 ಕ್ಕೆ ತಿದ್ದುಪಡಿ ಕುರಿತು |

**ಠರಾವು:**

ದೀರ್ಘ ಚರ್ಚೆಯ ನಂತರ, ಕರ್ನಾಟಕ ಸರಕಾರದ ಆದೇಶ ಸಂ. AHD 64 AUM 2009 ದಿನಾಂಕ 24–3–2010 ರಲ್ಲಿ ತಿಳಿಯಪಡಿಸಿದ ಅವಕಾಶಗಳ ಪ್ರಕಾರ ಸಿ.ಎ.ಎಸ್.–2006 ರ ನಿಯಮ 3.1.1 ರಲ್ಲಿಯ ಸೇವಾ ಅವಶ್ಯಕತೆಗಳು ಹಾಗೂ ಸಂಶೋಧನಾ ಪ್ರಕಟಣೆಗಳಲ್ಲಿ ತಿದ್ದುಪಡಿಗಳಿಗೆ / ಸ್ಪಷ್ಟೀಕರಣಗಳಿಗೆ ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು. (ಕ್ರಮ : ಕುಲಸಚಿವರು)

| | |
|---|---|
| ಅನುಕ್ರಮ ಸಂ: 9 | ಸಿ.ಎ.ಎಸ್.2006 ಯೋಜನೆಯಡಿ ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಶಿಕ್ಷಕರ ಪದೋನ್ನತಿ ಕುರಿತು |

**ಠರಾವು:**

ದೀರ್ಘ ಚರ್ಚೆಯ ನಂತರ, ಸಿ.ಎ.ಎಸ್.–2006 ಅಡಿ ಪದೋನ್ನತಿಗಾಗಿ ಶಿಕ್ಷಕರ ಪಟ್ಟಿ, ಅನುಸರಿಸಿದ ಮಾನದಂಡಗಳು / ಅಳವಡಿಸಿಕೊಂಡ ಸ್ಕೋರ್ ಕಾರ್ಡ್‌ನ ವಿವರಣೆಯನ್ನು ಸವಿಸ್ತಾರವಾಗಿ ಪ್ರಸ್ತಾವನೆಯಲ್ಲಿ ತಿಳಿಯಪಡಿಸಿದಂತೆ ಅನುಸರಿಸುವ ಪದ್ಧತಿಯ ವಿವರಗಳನ್ನು ಎಲ್ಲಾ ಸದಸ್ಯರ ಮಾಹಿತಿಗಾಗಿ ಒದಗಿಸಲು ಸಲಹೆ ನೀಡಿದರು. ಆದಾಗ್ಯೂ, ವಿವಿಧ ವೃಂದಗಳಲ್ಲಿ ಪದೋನ್ನತಿ ಹೊಂದುವ ಅಬ್ಯರ್ಥಿಗಳ ಯಾದಿ ಹಾಗೂ ಅವರ ವಿವರಗಳನ್ನು ಪರಿಶೀಲಿಸಲಾಯಿತು ಮತ್ತು ತಕ್ಷಣವೇ ಸೂಕ್ತ ಆದೇಶಗಳನ್ನು ನೀಡಲು ಅನುಮೋದನೆ ನೀಡಲಾಯಿತು.

(ಕ್ರಮ : ಕುಲಸಚಿವರು)

| | |
|---|---|
| ಅನುಕ್ರಮ ಸಂ:10 | ಮಿಸ್ಸಿಸ್ಸಿಪ್ಪಿ ಸ್ಟೇಟ್ ಯುನಿವರ್ಸಿಟಿ (ಎಮ್.ಎಸ್.ಯು), ಯು.ಎಸ್.ಎ. ಯೊಂದಿಗಿನ ಒಡಂಬಡಿಕೆಗೆ ಸಹಿ ಹಾಕುವ ಕುರಿತು. |

**ಠರಾವು:**

ಸದರಿ ವಿಷಯಕ್ಕೆ ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು. ಮಳೆಯಾಧಾರಿತ / ಸೂಕ್ಷ್ಮ ನೀರಾವರಿ ತಂತ್ರಜ್ಞಾನ ಇತ್ಯಾದಿಗಳ ಕುರಿತು ಇಸ್ರಾಯೀಲ್ ದೇಶದ ಸಂಸ್ಥೆಗಳೊಂದಿಗೆ ಒಡಂಬಡಿಕೆಗಳನ್ನು ವೃದ್ಧಿಪಡಿಸಿಕೊಳ್ಳಲು ಹಾಗೂ ಮಹಾರಾಷ್ಟ್ರದಲ್ಲಿ ಕೃಷಿ ಉತ್ಪನ್ನಗಳ ಪ್ಯಾಕೇಜಿಂಗ್‌ಗೆ ಸಂಬಂಧಿಸಿದಂತೆ ಕೊಯ್ಲೋತ್ತರ ತಂತ್ರಜ್ಞಾನದ ಮಾಹಿತಿಯನ್ನು ಅಭಿವೃದ್ಧಿಪಡಿಸಲು ಪ್ರಧಾನ ಕಾರ್ಯದರ್ಶಿಗಳು (ಕೃಷಿ) ಅವರು ಸಲಹೆ ನೀಡಿದರು. ಈಗಾಗಲೇ ವಿವಿಧ ಸಂಸ್ಥೆಗಳವರೊಂದಿಗೆ ಮಾಡಿಕೊಂಡಿರುವ ಒಡಂಬಡಿಕೆಗಳ ಮಾಹಿತಿ ಹಾಗೂ ಈ ಕುರಿತು ಇದುವರೆಗೂ ಸಾಧಿಸಲಾದ ಸಾಧನೆ ಹಾಗೂ ಪ್ರಗತಿ ವರದಿಯನ್ನು ಮುಂದಿನ ಸಭೆಯಲ್ಲಿ ಒದಗಿಸಲು ಸಲಹೆ ನೀಡಲಾಯಿತು. ಯು.ಕೆ. ಮತ್ತು ಯು.ಎಸ್.ಎ. ಗಳಲ್ಲಿ ನೀಡುತ್ತಿರುವಂತೆ ಪ್ರಮುಖ ವಿಷಯಗಳಲ್ಲಿ ವಿದ್ಯಾರ್ಥಿಗಳಿಗೆ ಇಬ್ಬಗೆಯ ಪದವಿಗಳನ್ನು ನೀಡುವ ಸಾಧ್ಯಾಸಾಧ್ಯತೆಗಳನ್ನು ಕಂಡುಕೊಳ್ಳಲು ಸಹ ಸಲಹೆ ನೀಡಿದರು.

(ಕ್ರಮ : ಕುಲಸಚಿವರು)

| ಅನುಕ್ರಮ ಸಂ: 11 | ಭಾರತ ಸರಕಾರದ ಯೋಜನೆಯ ಶೋಧನಾ ತಂಡವು ದಕ್ಷಿಣ ಆಫ್ರಿಕಾದ ವಿವಿಧ ಪ್ರಯೋಗಾಲಯಗಳಿಗೆ ಭೇಟಿ ನೀಡುವ ಕುರಿತು. |
|---|---|

**ಠರಾವು:**

ಚರ್ಚೆಯ ನಂತರ ಸದರಿ ವಿಷಯಕ್ಕೆ ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು. ದೇಶದಲ್ಲಿರುವ ಹಾಗೂ ವಿದೇಶಗಳಲ್ಲಿರುವ ಅದರಲ್ಲಿಯೂ ಪ್ರಮುಖವಾಗಿ ಇಸ್ರಾಯೀಲ್‌ನ ವಿವಿಧ ಪ್ರತೀಷ್ಠತ ಸಂಸ್ಥೆಗಳಿಗೆ ವಿಶ್ವವಿದ್ಯಾಲಯದ ಕೆಲವು ವಿಜ್ಞಾನಿಗಳವರೊಂದಿಗೆ ವ್ಯವಸ್ಥಾಪನಾ ಮಂಡಳಿಯ ಸದಸ್ಯರು ಭೇಟಿ ನೀಡುವ ಪ್ರಸ್ತಾವನೆಯನ್ನು ಸಲ್ಲಿಸಲು ಸಹ ಸಲಹೆ ನೀಡಲಾಯಿತು. ವ್ಯವಸ್ಥಾಪನಾ ಮಂಡಳಿಯ ಸದಸ್ಯರು ವಿದೇಶಗಳಿಗೆ ಭೇಟಿ ನೀಡುವ ಪ್ರಸ್ತಾವನೆಯನ್ನು ಸರಕಾರದ ಅನುಮೋದನೆಗಾಗಿ ಸಲ್ಲಿಸಬೇಕಾಗುವುದು. (ಕ್ರಮ : ಕುಲಸಚಿವರು)

| ಅನುಕ್ರಮ ಸಂ:12 | ಹತ್ತು ಲಕ್ಷ ರೂಪಾಯಿಗಳಿಗೆ ಮೀರಿದ ಹೊಸ ಸಿವಿಲ್ ಕಾಮಗಾರಿಗಳನ್ನು ಕೈಗೊಳ್ಳಲು ಅನುಮೋದನೆ ಕುರಿತು. |
|---|---|

**ಠರಾವು:**

ಚರ್ಚೆಯ ನಂತರ ವಿವಿಧ ಆವರಣಗಳಲ್ಲಿ 2013–14 ನೇ ಸಾಲಿನಲ್ಲಿ ಕೈಗೊಳ್ಳಬೇಕಾದ ಹೊಸ ಸಿವಿಲ್ ಕಾಮಗಾರಿಗಳಿಗೆ ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು.

(ಕ್ರಮ : ಕಾರ್ಯನಿರ್ವಾಹಕ ಅಭಿಯಂತರರು)

| ಅನುಕ್ರಮ ಸಂ:13 | ಕ್ರೀಡಾ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಿಗೆ ಬರುವ ವಿದ್ಯಾರ್ಥಿಗಳಿಗೆ ಮತ್ತು ತೀರ್ಪುದಾರರಿಗೆ ಹಾಗೂ ತರಬೇತುದಾರರಿಗೆ ಕೊಡುವ ಗೌರವಧನ, ತುಟ್ಟಿಭತ್ಯೆ ಮತ್ತು ಪ್ರಯಾಣ ಭತ್ಯೆ ಹೆಚ್ಚಿಸುವ –ಕುರಿತು. |
|---|---|

**ಠರಾವು:**

ದೀರ್ಘ ಚರ್ಚೆಯ ನಂತರ, ವಿದ್ಯಾರ್ಥಿಗಳಿಗೆ ಮತ್ತು ತೀರ್ಪುದಾರರಿಗೆ ಹಾಗೂ ತರಬೇತುದಾರರಿಗೆ ಕೊಡುವ ಗೌರವಧನ, ತುಟ್ಟಿಭತ್ಯೆ ಮತ್ತು ಪ್ರಯಾಣ ಭತ್ಯೆ ಹೆಚ್ಚಿಸಲು ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು. (ಕ್ರಮ : ಕುಲಸಚಿವರು / ಡೀನ್(ವಿದ್ಯಾರ್ಥಿ ಕಲ್ಯಾಣ))

| ಅನುಕ್ರಮ ಸಂ:14 | ನಡತೆ ಮತ್ತು ಶಿಸ್ತನ್ನು ಕಾಪಾಡಲು ಕೃವಿ.ವಿ. ರಾಯಚೂರಿನ ವಸತಿನಿಲಯಗಳ ನಿಯಮಗಳಿಗೆ ಅನುಮೋದನೆ –ಕುರಿತು |
|---|---|

**ಠರಾವು:**

ದೀರ್ಘ ಚರ್ಚೆಯ ನಂತರ, ಪ್ರಸ್ತಾವಿತ ನಡತೆ ಮತ್ತು ಶಿಸ್ತನ್ನು ಕಾಪಾಡಲು ಕೃ.ವಿ.ವಿ. ರಾಯಚೂರಿನ ವಸತಿನಿಲಯಗಳ ನಿಯಮಗಳಿಗೆ ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು.

(ಕ್ರಮ : ಕುಲಸಚಿವರು / ಡೀನ್(ವಿದ್ಯಾರ್ಥಿ ಕಲ್ಯಾಣ))

| ಅನುಕ್ರಮ ಸಂ:15 | ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಪ್ರಕಟಣಾ ಕೇಂದ್ರವನ್ನು ಸ್ಥಾಪಿಸುವ –ಕುರಿತು |
|---|---|

**ಠರಾವು:**

ವಿಸ್ತೃತ ಚರ್ಚೆಯ ನಂತರ, ಹೊಸದಾಗಿ ಹುದ್ದೆಗಳನ್ನು ಸೃಜಿಸುವ ಬದಲಾಗಿ ವಿಶ್ವವಿದ್ಯಾಲಯದಲ್ಲಿ ಮಂಜೂರಾದ ಕೆಲವೊಂದು ಹುದ್ದೆಗಳನ್ನು ಪುನರ್–ನಿಯೋಜನೆ ಮಾಡುವುದರೊಂದಿಗೆ ಕೃಷಿ ವಿಶ್ವವಿದ್ಯಾಲಯ ರಾಯಚೂರಿನಲ್ಲಿ ಪ್ರಕಟಣಾ ಕೇಂದ್ರವನ್ನು ಸ್ಥಾಪಿಸಲು ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು. ಆದಾಗ್ಯೂ, ಕೃವಿವಿ ಧಾರವಾಡ ವಿಭಜನೆಗೊಳ್ಳುವುದಕ್ಕಿಂತ ಪೂರ್ವದಲ್ಲಿ ಕರ್ನಾಟಕ ಸರಕಾರದ ಆರ್ಥಿಕ ಇಲಾಖೆಯ

ಸಲಹೆಯಂತೆ ಅಲ್ಲಿಯ ವಿವಿಧ ನಿರ್ದೇಶನಾಲಯಗಳಲ್ಲಿ / ಹಣಕಾಸು ನಿಯಂತ್ರಣಾಧಿಕಾರಿ / ಆಡಳಿತಾಧಿಕಾರಿ / ಆಸ್ತಿ ಅಧಿಕಾರಿ ಕಚೇರಿಗಳಿಗಾಗಿ ಮಂಜೂರಾಗಿರುವ ಹುದ್ದೆಗಳ ವರ್ಗಾವಣೆಗಾಗಿ ಕೃವಿವಿ ಧಾರವಾಡ ಮತ್ತು ಕೃವಿವಿ ರಾಯಚೂರಿನ ಕುಲಪತಿಗಳವರ ಜಂಟಿ ಸಭೆಯನ್ನು ಕರೆಯುವಂತೆ ಸಭಾಧ್ಯಕ್ಷರು ಪ್ರಧಾನ ಕಾರ್ಯದರ್ಶಿಗಳು (ಕೃಷಿ) ಅವರಲ್ಲಿ ವಿನಂತಿಸಿಕೊಂಡರು.

(ಕ್ರಮ : ಕುಲಸಚಿವರು/ಸಂಶೋಧನಾ ನಿರ್ದೇಶಕರು/ವಿಸ್ತರಣಾ ನಿರ್ದೇಶಕರು/ಹಣಕಾಸು ನಿಯಂತ್ರಣಾಧಿಕಾರಿ)

| ಅನುಕ್ರಮ ಸಂ:16 | ಕೃಷಿ ವಿಜ್ಞಾನ ವಸ್ತು ಸಂಗ್ರಹಾಲಯ ಸ್ಥಾಪನೆ ಮತ್ತು ನಿರ್ವಹಣೆ –ಕುರಿತು |
|---|---|

**ಠರಾವು:**

ದೀರ್ಘ ಚರ್ಚೆಯ ನಂತರ, ಹೊಸದಾಗಿ ಹುದ್ದೆಗಳನ್ನು ಸೃಜಿಸುವ ಬದಲಾಗಿ ವಿಶ್ವವಿದ್ಯಾಲಯದಲ್ಲಿ ಮಂಜೂರಾದ ಕೆಲವೊಂದು ಹುದ್ದೆಗಳನ್ನು ಪುನರ್–ನಿಯೋಜನೆ ಮಾಡುವುದರೊಂದಿಗೆ ಕೃಷಿ ವಿಶ್ವವಿದ್ಯಾಲಯ ರಾಯಚೂರಿನಲ್ಲಿ ಕೃಷಿ ವಿಜ್ಞಾನ ವಸ್ತು ಸಂಗ್ರಹಾಲಯ ಸ್ಥಾಪಿಸಲು ಮತ್ತು ನಿರ್ವಹಣೆ ಮಾಡಲು ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು. (ಕ್ರಮ : ಕುಲಸಚಿವರು/ವಿಸ್ತರಣಾ ನಿರ್ದೇಶಕರು)

| ಅನುಕ್ರಮ ಸಂ:17 | "ತರಬೇತಿ ಕೇಂದ್ರ" ದ ಸ್ಥಾಪನೆ –ಕುರಿತು |
|---|---|

**ಠರಾವು:**

ದೀರ್ಘ ಚರ್ಚೆಯ ನಂತರ, ಹೊಸದಾಗಿ ಹುದ್ದೆಗಳನ್ನು ಸೃಜಿಸುವ ಬದಲಾಗಿ ವಿಶ್ವವಿದ್ಯಾಲಯದಲ್ಲಿ ಮಂಜೂರಾದ ಕೆಲವೊಂದು ಹುದ್ದೆಗಳನ್ನು ಮಾರ್ಪಡಿಸುವುದರೊಂದಿಗೆ ಕೃಷಿ ವಿಶ್ವವಿದ್ಯಾಲಯ ರಾಯಚೂರಿನಲ್ಲಿ ತರಬೇತಿ ಕೇಂದ್ರವನ್ನು ಸ್ಥಾಪಿಸಲು ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು.

(ಕ್ರಮ : ಕುಲಸಚಿವರು/ವಿಸ್ತರಣಾ ನಿರ್ದೇಶಕರು)

| ಅನುಕ್ರಮ ಸಂ:18 | "ಸಮುದಾಯ ಬಾನುಲಿ ಕೇಂದ್ರ" ದ ಸ್ಥಾಪನೆ –ಕುರಿತು |
|---|---|

**ಠರಾವು:**

ದೀರ್ಘ ಚರ್ಚೆಯ ನಂತರ, ಹೊಸದಾಗಿ ಹುದ್ದೆಗಳನ್ನು ಸೃಜಿಸುವ ಬದಲಾಗಿ ವಿಶ್ವವಿದ್ಯಾಲಯದಲ್ಲಿ ಮಂಜೂರಾದ ಕೆಲವೊಂದು ಹುದ್ದೆಗಳನ್ನು ಪುನರ್–ನಿಯೋಜನೆ ಮಾಡುವುದರೊಂದಿಗೆ ಕೃಷಿ ವಿಶ್ವವಿದ್ಯಾಲಯ ರಾಯಚೂರಿನಲ್ಲಿ ಸಮುದಾಯ ಬಾನುಲಿ ಕೇಂದ್ರ ಸ್ಥಾಪಿಸಲು ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು. (ಕ್ರಮ : ಕುಲಸಚಿವರು/ವಿಸ್ತರಣಾ ನಿರ್ದೇಶಕರು)

| ಅನುಕ್ರಮ ಸಂ:19 | ಕೃಷಿ ವಿಶ್ವವಿದ್ಯಾಲಯದ ಹತ್ತಿ ತಳಿಗಳನ್ನು ಬಿ.ಟಿ. ಹತ್ತಿ ಹೈಬ್ರಿಡ್‌ಗಳಾಗಿ ಪರಿವರ್ತಿಸುವ ಬಗ್ಗೆ |
|---|---|

**ಠರಾವು:**

ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಹತ್ತಿ ತಳಿಗಳನ್ನು ಬಿ.ಟಿ. ಹತ್ತಿ ಹೈಬ್ರಿಡ್‌ಗಳಾಗಿ ಕರ್ನಾಟಕ ರಾಜ್ಯ ಬೀಜ ನಿಗಮ ನಿಯಮಿತ ಸಂಸ್ಥೆ ವತಿಯಿಂದ ಪರಿವರ್ತಿಸಲು ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು.

(ಕ್ರಮ : ಕುಲಸಚಿವರು/ಸಂಶೋಧನಾ ನಿರ್ದೇಶಕರು)

| | |
|---|---|
| ಅನುಕ್ರಮ ಸಂ:20 | ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಸ್ನಾತಕ ಹಾಗೂ ಸ್ನಾತಕೋತ್ತರ ಅಧ್ಯಯನಗಳ ಶುಲ್ಕ ಹೆಚ್ಚಿಸುವ ಕುರಿತು |

ಠರಾವು:

ದೀರ್ಘ ಚರ್ಚೆಯ ನಂತರ, ಸದರಿ ವಿಷಯಕ್ಕೆ ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು. ಸಿ.ಇ.ಟಿ. ಯಲ್ಲಿರುವಂತಹ ಶುಲ್ಕಗಳಂತೆ ಹಾಗೂ ಎಲ್ಲಾ ಕೃಷಿ ವಿಶ್ವವಿದ್ಯಾಲಯಗಳಲ್ಲಿ ಅನುಸರಿಸುತ್ತಿರುವ ಹಾಗೆ ಇರುವಂತೆ ನೋಡಿಕೊಳ್ಳಲಾಗುವುದೆಂದು ಮಾನ್ಯ ಸಭಾಧ್ಯಕ್ಷರು ತಿಳಿಯಪಡಿಸಿದರು. (ಕ್ರಮ : ಕುಲಸಚಿವರು)

| | |
|---|---|
| ಅನುಕ್ರಮ ಸಂ:21 | ಕೃಷಿ ವಿಶ್ವವಿದ್ಯಾಲಯ ರಾಯಚೂರಿಗೆ 2013–14 ನೇ ಆರ್ಥಿಕ ವರ್ಷದಲ್ಲಿ ಯೋಜನೇತರ ಅನುದಾನದ ಅಡಿಯಲ್ಲಿ ಹೆಚ್ಚಿನ ಅನುದಾನದ ಬೇಡಿಕೆ ಕುರಿತು |

ಠರಾವು:

ದೀರ್ಘ ಚರ್ಚೆಯ ನಂತರ, ಮಾನ್ಯ ವ್ಯವಸ್ಥಾಪನಾ ಮಂಡಳಿಯು ಇದಕ್ಕೆ ಅನುಮೋದನೆ ನೀಡುತ್ತಾ ಪ್ರಸ್ತುತ ಆರ್ಥಿಕ ವರ್ಷದಲ್ಲಿ ಯೋಜನೇತರ ಅಡಿಯಲ್ಲಿ 3ನೇ ತ್ರೈಮಾಸಿಕದ ಮಂಜೂರಿಯಾದ ನಂತರ ಉಳಿದ 7 ತಿಂಗಳಿಗೆ ಬೇಕಾಗುವ ಅನುದಾನಕ್ಕಾಗಿ ಆರ್ಥಿಕ ಇಲಾಖೆಗೆ ಪತ್ರವನ್ನು ಬರೆಯಲು ಸಮ್ಮತಿ ಸೂಚಿಸಿತು.

(ಕ್ರಮ : ಕುಲಸಚಿವರು / ಹಣಕಾಸು ನಿಯಂತ್ರಣಾಧಿಕಾರಿ)

| | |
|---|---|
| ಹೆಚ್ಚುವರಿ ಅನುಕ್ರಮ ಸಂ: 1 | 2013–14 ಸಾಲಿನ ವಿವಿಧ ಬೀಜೋತ್ಪಾದನಾ ಕಾರ್ಯಕ್ರಮಗಳು ಮತ್ತು ಬೀಜ ಗ್ರಾಮ ಯೋಜನೆಗಳ ಅನುಷ್ಠಾನಕ್ಕೆ ಬೇಕಾಗುವ ಹಣಕಾಸಿನ ಅನುಮೊದನೆ |

ಠರಾವು:

ದೀರ್ಘ ಚರ್ಚೆಯ ನಂತರ, ಕೃವಿವಿ ರಾಯಚೂರಿನ ವಿವಿಧ ಆವರಣಗಳಲ್ಲಿ 2013–14 ಸಾಲಿನ ವಿವಿಧ ಬೀಜೋತ್ಪಾದನಾ ಕಾರ್ಯಕ್ರಮಗಳು ಮತ್ತು ಬೀಜ ಗ್ರಾಮ ಯೋಜನೆಗಳ ಅನುಷ್ಠಾನಕ್ಕೆ ಬೇಕಾಗುವ ಹಣಕಾಸಿನ ಪ್ರಸ್ತಾವನೆಗೆ ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು.

(ಕ್ರಮ : ಕುಲಸಚಿವರು/ವಿಶೇಷಾಧಿಕಾರಿ (ಬೀಜ))

| | |
|---|---|
| ಹೆಚ್ಚುವರಿ ಅನುಕ್ರಮ ಸಂ: 2 | ಕೃಷಿ ವಿಶ್ವವಿದ್ಯಾಲಯದ ವಿವಿಧ ಕೇಂದ್ರಗಳಲ್ಲಿ ಮಾರಾಟವಾಗದೇ ಉಳಿದ ಬೀಜವನ್ನು ಧಾನ್ಯವಾಗಿ ಪರಿವರ್ತನೆ ಮಾಡಲು ಪ್ರಸ್ತಾವನೆ |

ಠರಾವು:

ದೀರ್ಘ ಚರ್ಚೆಯ ನಂತರ, ಮಾರಾಟವಾಗದೇ ಉಳಿದ ಬೀಜವನ್ನು ಧಾನ್ಯವಾಗಿ ಪರಿವರ್ತನೆ ಮಾಡಿ ತಕ್ಷಣವೇ ಮಾರಾಟ ಮಾಡಲು ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು. ಪ್ರಧಾನ ಕಾರ್ಯದರ್ಶಿಗಳು (ಕೃಷಿ) ಅವರು ವಿವಿಧ ತಳಿಗಳ ಬೀಜಗಳ ಗುಣಮಟ್ಟವನ್ನು ಕಡ್ಡಾಯವಾಗಿ ಕಾಪಾಡಿಕೊಂಡು ಹೋಗಲು ಸಲಹೆ ನೀಡಿದರು.

(ಕ್ರಮ : ಕುಲಸಚಿವರು/ವಿಶೇಷಾಧಿಕಾರಿ (ಬೀಜ))

| | |
|---|---|
| ಹೆಚ್ಚುವರಿ ಅನುಕ್ರಮ ಸಂ: 3 | ಸಿ.ಎ.ಎಸ್.96 ಯೋಜನೆಯಡಿ ಪದೋನ್ನತಿಗಾಗಿ ಅರ್ಜಿ ಸಲ್ಲಿಸಿದ ಶಿಕ್ಷಕರುಗಳಿಂದ ಪ್ರೊಸೆಸಿಂಗ್–ಫೀ ಸಂಗ್ರಹಿಸುವ ಕುರಿತು. |

ಠರಾವು:

ದೀರ್ಘ ಚರ್ಚೆಯ ನಂತರ, ಸದರಿ ವಿಷಯಕ್ಕೆ ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು ಹಾಗೂ ಕೃವಿವಿ ಅಧಿಸೂಚನೆ ದಿನಾಂಕ 19–3–2013 ರ ಪ್ರಕಾರ ಸಿ.ಎ.ಎಸ್.96 ಯೋಜನೆಯಡಿ ಪದೋನ್ನತಿಗಾಗಿ

ಅರ್ಜಿ ಸಲ್ಲಿಸಿದ ಶಿಕ್ಷಕರುಗಳಿಂದ ಕರ್ನಾಟಕ ರಾಜ್ಯ ಪತ್ರದಲ್ಲಿ ಅಧಿಸೂಚಿಸಿದ ದಿನಾಂಕ 11–7–2013 ರಿಂದ ಅನ್ವಯವಾಗುವಂತೆ ಪ್ರೊಸೆಸಿಂಗ್–ಫೀ ಸಂಗ್ರಹಿಸಲು ಸಲಹೆ ನೀಡಿತು. (ಕ್ರಮ : ಕುಲಸಚಿವರು)

| | |
|---|---|
| ಹೆಚ್ಚುವರಿ ಅನುಕ್ರಮ ಸಂ: 4 | **ಕೃಷಿ ವಿಶ್ವವಿದ್ಯಾಲಯ, ರಾಯಚೂರಿನಲ್ಲಿ ಪಿ.ಹೆಚ್.ಡಿ. ಪದವಿ ಮತ್ತು ಎಮ್.ಎಸ್ಸಿ. (ಕೃಷಿ), ಎಮ್.ಟೆಕ್. (ಕೃಷಿ ತಾಂತ್ರಿಕ) ಅತಿಥಿ ಉಪನ್ಯಾಸ ಹಾಗೂ ಬಾಹ್ಯ ಪರೀಕ್ಷಕ ಶಿಕ್ಷಕರ/ವಿಜ್ಞಾನಿಗಳ ಗೌರವ ಸಂಭಾವನೆ ಹೆಚ್ಚಿಸುವ ಕುರಿತು.** |

**ಠರಾವು:**

ದೀರ್ಘ ಚರ್ಚೆಯ ನಂತರ, ಕೃಷಿ ವಿಶ್ವವಿದ್ಯಾಲಯ, ರಾಯಚೂರಿನಲ್ಲಿ ಪಿ.ಹೆಚ್.ಡಿ. ಪದವಿ ಮತ್ತು ಎಮ್.ಎಸ್ಸಿ. (ಕೃಷಿ), ಎಮ್.ಟೆಕ್. (ಕೃಷಿ ತಾಂತ್ರಿಕ) ಅತಿಥಿ ಉಪನ್ಯಾಸ ಹಾಗೂ ಬಾಹ್ಯ ಪರೀಕ್ಷಕ ಶಿಕ್ಷಕರ/ವಿಜ್ಞಾನಿಗಳ ಗೌರವ ಸಂಭಾವನೆ ಹೆಚ್ಚಿಸುವ ಪ್ರಸ್ತಾವನೆಗೆ ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು.

(ಕ್ರಮ : ಕುಲಸಚಿವರು/ಡೀನ್(ಸ್ನಾತಕೋತ್ತರ))

| | |
|---|---|
| ಹೆಚ್ಚುವರಿ ಅನುಕ್ರಮ ಸಂ: 5 | **ಕೃಷಿ ವಿಶ್ವವಿದ್ಯಾಲಯ, ರಾಯಚೂರಿನಲ್ಲಿ ವ್ಯಾಸಂಗ ಮಾಡುವ ಪಿ.ಹೆಚ್.ಡಿ. ಪದವಿ ಮತ್ತು ಎಮ್.ಎಸ್ಸಿ. (ಕೃಷಿ), ಎಮ್.ಟೆಕ್. (ಕೃಷಿ ತಾಂತ್ರಿಕ) ವಿದ್ಯಾರ್ಥಿಗಳ ಮೆರಿಟ್ ಹಾಗೂ ಪ್ರೋತ್ಸಾಹಕ ವಿದ್ಯಾರ್ಥಿ ವೇತನಗಳನ್ನು ಹೆಚ್ಚಿಸುವ ಕುರಿತು.** |

**ಠರಾವು:**

ದೀರ್ಘ ಚರ್ಚೆಯ ನಂತರ, ಪಿ.ಹೆಚ್.ಡಿ. ಪದವಿ ಮತ್ತು ಎಮ್.ಎಸ್ಸಿ. (ಕೃಷಿ), ಎಮ್.ಟೆಕ್. (ಕೃಷಿ ತಾಂತ್ರಿಕ) ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳ ಮೆರಿಟ್ ಹಾಗೂ ಪ್ರೋತ್ಸಾಹಕ ವಿದ್ಯಾರ್ಥಿ ವೇತನಗಳನ್ನು 2013=14 ಶೈಕ್ಷಣಿಕ ವರ್ಷದಿಂದ ಹೆಚ್ಚಿಸುವ ಪ್ರಸ್ತಾವನೆಗೆ ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು.

(ಕ್ರಮ : ಕುಲಸಚಿವರು/ಡೀನ್(ಸ್ನಾತಕೋತ್ತರ))

| | |
|---|---|
| ಹೆಚ್ಚುವರಿ ಅನುಕ್ರಮ ಸಂ: 6 | **ಗುತ್ತಿಗೆ ಆಧಾರದ ಮೇಲೆ ನೇಮಕವಾದ ಭೋದಕರಿಗೆ ಮಾಸಿಕ ಗೌರವಧನ / ಸಂಭಾವನೆ ಹೆಚ್ಚಿಸುವ ಕುರಿತು.** |

**ಠರಾವು:**

ದೀರ್ಘ ಚರ್ಚೆಯ ನಂತರ, ಗುತ್ತಿಗೆ ಆಧಾರದ ಮೇಲೆ ನೇಮಕವಾದ ಭೋದಕರಿಗೆ ಮಾಸಿಕ ಗೌರವಧನ / ಸಂಭಾವನೆ ಹೆಚ್ಚಿಸುವ ಪ್ರಸ್ತಾವನೆಗೆ ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು.

(ಕ್ರಮ : ಕುಲಸಚಿವರು)

| | |
|---|---|
| ಹೆಚ್ಚುವರಿ ಅನುಕ್ರಮ ಸಂ: 7 | **ಕೃವಿವಿ ರಾಯಚೂರು ಆವರಣದಲ್ಲಿ "ಕೃಷಿ ವಿಜ್ಞಾನ ವಸ್ತು ಸಂಗ್ರಹಾಲಯ" ಸ್ಥಾಪನೆಗಾಗಿ ಹಣಕಾಸಿನ ಮಂಜೂರಾತಿ ಕುರಿತು.** |

**ಠರಾವು:**

ದೀರ್ಘ ಚರ್ಚೆಯ ನಂತರ, ಕೃಷಿ ವಿಶ್ವವಿದ್ಯಾಲಯದ ಮುಖ್ಯ ಆವರಣದಲ್ಲಿ ಕೃಷಿ ವಿಜ್ಞಾನ ವಸ್ತು ಸಂಗ್ರಹಾಲಯವನ್ನು ಸ್ಥಾಪಿಸುವ ಸಲುವಾಗಿ ಒಟ್ಟು ರೂ. 49.39 ಲಕ್ಷ ಮಂಜೂರಾತಿಗಾಗಿ ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು. (ಕ್ರಮ : ಕುಲಸಚಿವರು/ವಿಸ್ತರಣಾ ನಿರ್ದೇಶಕರು)

| | |
|---|---|
| ಹೆಚ್ಚುವರಿ ಅನುಕ್ರಮ ಸಂ: 8 | ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ದೈನಿಕ / ಮಾಸಿಕ ವೇತನ ನೌಕರರಿಗೆ ಕನಿಷ್ಠ ಮೂಲ ವೇತನ ಮಂಜೂರು ಮಾಡುವ ಕುರಿತು. |

ಠರಾವು:

ಈ ವಿಷಯವನ್ನು ಸುದೀರ್ಘವಾಗಿ ಚರ್ಚಿಸಲಾಯಿತು ಹಾಗೂ ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಸಿ ಮತ್ತು ಡಿ ವೃಂದದಲ್ಲಿಯ ಡಿ.ಆರ್.ಇ. / ಎಂ.ಆರ್.ಇ. ಕಾರ್ಮಿಕರಿಗೆ ಕನಿಷ್ಟ ಮೂಲ ವೇತನ ನೀಡಲು ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು. ಸದರಿ ಕಾರ್ಮಿಕರು ಪ್ರಸ್ತುತ ಪಡೆಯುತ್ತಿರುವ ಒಟ್ಟು ವೇತನ ಹಾಗೂ ಪ್ರಸ್ತಾವಿತ ಕನಿಷ್ಟ ಮೂಲ ವೇತನದಲ್ಲಿ ಪಡೆಯುವ ಒಟ್ಟು ವೇತನದ ಕಾರ್ಮಿಕವಾರು ವಿವರಗಳನ್ನು ಈ ಕೆಳಗಿನ ಷರಾಗಳೊಂದಿಗೆ ನೀಡಲು ಉಪ-ಕಾರ್ಯದರ್ಶಿಗಳು (ಹಣಕಾಸು) ಅವರು ಸಲಹೆ ನೀಡಿದರು. ಸರಕಾರದಿಂದ ಈ ಕುರಿತು ಸ್ಪಷ್ಟೀಕರಣ ಬರುವವರೆಗೆ ಹೊಂದಿದ ಹುದ್ದೆಗೆ ಮಾತ್ರ ಕನಿಷ್ಟ ಮೂಲ ವೇತನವನ್ನು ಭವಿಷ್ಯವರ್ತಿಯಾಗಿ ನೀಡಲಾಗುವುದು. ಹೀಗಾಗಿ, ಇತರೇ ಭತ್ಯೆ ಮತ್ತು ರಜಾ ಸೌಲಭ್ಯ ಇತ್ಯಾದಿಗಳು ಸರಕಾರದ ಅನುಮೋದನೆಗೊಳಪಟ್ಟಿರುತ್ತವೆ. (ಕ್ರಮ : ಕುಲಸಚಿವರು)

ಕುಲಸಚಿವರು ಹಾಗೂ ವ್ಯವಸ್ಥಾಪನಾ ಮಂಡಳಿಯ ಸದಸ್ಯ-ಕಾರ್ಯದರ್ಶಿಯವರ ಧನ್ಯವಾದಗಳೊಂದಿಗೆ ಸಭೆಯು ಮುಕ್ತಾಯಗೊಂಡಿತು.

| | |
|---|---|
| ಸಹಿ /- 5-10-2013 | ಸಹಿ /- 5-10-2013 |
| **(ಬಿ.ವಿ. ಪಾಟೀಲ)** | **(ಡಿ.ಪಿ. ಬಿರಾದಾರ)** |
| ಕುಲಪತಿಗಳು ಹಾಗೂ ಅಧ್ಯಕ್ಷರು | ಕುಲಸಚಿವರು ಹಾಗೂ ಸದಸ್ಯ-ಕಾರ್ಯದರ್ಶಿ |
| ವ್ಯವಸ್ಥಾಪನಾ ಮಂಡಳಿ, ಕೃವಿವಿ ರಾಯಚೂರು. | ವ್ಯವಸ್ಥಾಪನಾ ಮಂಡಳಿ, ಕೃವಿವಿ ರಾಯಚೂರು. |

**(ಡಿ.ಪಿ. ಬಿರಾದಾರ)**
ಕುಲಸಚಿವರು ಹಾಗೂ ಸದಸ್ಯ-ಕಾರ್ಯದರ್ಶಿ
ವ್ಯವಸ್ಥಾಪನಾ ಮಂಡಳಿ, ಕೃವಿವಿ ರಾಯಚೂರು.

16